ಹೋದೆ. ನಾನು ಮರಳಿ ಹೂ ಬಿಡಿಸಿಕೊಂಡು ಬರುವುದರೊಳಗಾಗಿ ದೇವಿಯ ಮುಖ ತೊಳೆದು, ಅವಳಿಗೊಂದು ಹಸಿರು ಬಣ್ಣದ ಸೀರೆ ಉಡಿಸುತ್ತಿದ್ದಳು. ದೇವಿಯ ಪೂಜೆ ಮುಗಿಯುವ ಹೊತ್ತಿಗೆ ಸೂರ್ಯ ಮೂಡಣದಿಂದ ನಾಕೈದು ಮಾರು ಮುಂದೆ ಬಂದಿದ್ದ.

ಮನೆಯತ್ತ ಮರಳಬೇಕು ಅನ್ನುವಷ್ಟರಲ್ಲಿ ಯಾರೋ ನಮ್ಮನ್ನು ಕೂಗಿದಂತೆ ಅನಿಸಿತು. ಯಾರೆಂದು ಅತ್ತಿತ್ತ ನೋಡುವ ಹೊತ್ತಿಗೆ ಬಿಳಿ ಅಂಗಿ, ಧೋತರಾ, ಹೆಗಲ ಮೇಲೊಂದು ಟವಲ್ಲು ಹಾಕಿಕೊಂಡು ನಮ್ಮತ್ತಲೇ ಬರುವ ಮಂಟೂರ ರಾಮಣ್ಣನ ರೂಪ ನಿಚ್ಚಳವಾಗಿ ನಮಗೆ ಕಂಡಿತು. ಇಬ್ಬರೂ ಒಬ್ಬರ ಮೋತಿ ಒಬ್ಬರು ನೋಡಿಕೊಂಡೆವು. 'ಇಷ್ಟೊತ್ತನ್ಯಾಗ ಇಬ್ಬರೂ ಇಲ್ಲೇನ ಮಾಡಾಕತ್ತಿರೋ ಹನಮ್ಯಾ' ಅನ್ನುತ್ತಾ ರಾಮಣ್ಣ ಹತ್ತಿರವೇ ಬಂದ. ನಾವು ಮಾತಾಡದೇ ನಿಂತುಕೊಂಡಿದ್ದೆವು. ಊದಬತ್ತಿ ವಾಸನೆ ಅವನ ಮೂಗು ಗುರುತಿಸಿ ಅವನನ್ನು ಆ ಕಡೆ ಸೆಳೆಯಿತು. ರಾಮಣ್ಣ ದೇವಿಯನ್ನು ನೋಡಿದ್ದೇ ತಡ ದೀರ್ಘದಂಡ ನಮಸ್ಕಾರ ಹಾಕಿ, 'ಇದೇನು ಅಚ್ಚರಿಯೋ ಹನಮ್ಯಾ ಈ ಕಾಡಲ್ಲಿ ದೇವಿ ಅವತಾರ' ಎಂದು ರಾಮಣ್ಣ ಬೆರಗುಗೊಂಡು ಕೇಳಿದ. ಆಗ ನಾನು ಏನೂ ಮಾತಾಡಲಿಲ್ಲ. ನಡೆದ ಕಥೆಯನ್ನು ಪದ್ದಕ್ಕ, ರಾಮಣ್ಣನೆದರು ಚಾಚೂತಪ್ಪದೆ ಹೇಳಿದಳು. ರಾಮಣ್ಣ ಖುಷಿಯಿಂದಲೇ ನಮ್ಮೊಟ್ಟಿಗೆ ಊರತ್ತ ಹೆಜ್ಜೆ ಹಾಕಿದ. ಸಂಜೆ ಹೊತ್ತಿಗೆ ಊರಿಗೂರೇ ಕಿತ್ತೆದ್ದು ದೇವಿಯ ನೋಡಲು ಸಾಲುಗಟ್ಟಿತ್ತು.

* * *

ದೇವಪುರದಲ್ಲಿ ಪಾಟೀಲ ಶಂಕರಪ್ಪನದೇ ಹೆಚ್ಚು ನಡೆಯುತ್ತಿತ್ತು. ಸುತ್ತಮುತ್ತ ಹಳ್ಳ್ಯಾಗ ಇವನಷ್ಟು ಆಸ್ತಿ- ಅಂತಸ್ತು ಹೊಂದಿದವ ಮತ್ತೊಬ್ಬ ಇರಲಿಲ್ಲ. ರಾಜಕೀಯ ಖದರು, ಹಣಕಾಸಿನ ಪೊಗರು, ದೌಳಕಿಯ ದೊಡ್ಡಸ್ತಿಕೆ, ಬಡವರ ಮೇಲೆ ತೋರುವ ಅವನ ದರ್ಪ- ದೌರ್ಜನ್ಯ ಎಲ್ಲವೂ ಹೆಚ್ಚಾಗಿ, ಸೊಕ್ಕಿದ ಕ್ವಾಣದಂತೆ ದಂಡು ಕಟ್ಟಿಕೊಂಡು ಗೂಂಡಾಗಿರಿ ವರ್ತನೆ ಮಾಡುತ್ತಿದ್ದ.

ತನಗೆ ಗೊತ್ತಿಲ್ಲದೇ ತನ್ನೂರಲ್ಲಿ ಒಬ್ಬಳು ದೇವಿ ಉದ್ಭವಿಸಿ ಜನರಿಗೆ ದರುಶನ ಕೊಡುತ್ತಿರುವುದು ಅವನಿಗೆ ಸಹಿಸಲೂ ಆಗಲಿಲ್ಲ. 'ಕೇರಿಯ ಹುಡಗಿ ಮಾತ ಕಟಗೊಂಡ ಊರವರೆಲ್ಲಾ ಕೆಲಸಾ ಬಗಸಿ ಬಿಟ್ಟು ಬುದ್ಧಿಗೇಡಿಗತೆ ವರ್ತಿಸಾಕತ್ತಿರಲ್ಲಾ ಮಳ್ಳ ಸೂಮಕ್ಕಳ' ಎಂದು ಗುಡ್ಡದ ಹಾದಿ ಹಿಡದ ಹೋಗೂವವರಿಗೆ ಪಾಟೀಲರು ಹಚ್ಚಿ ಜಾಡ್ಸಿದ್ರು.



ಹಿರೇಗುಡ್ಡಕ ಹೋಗಿ ಬಂದವರು ತಮ್ಮ ಮೊಬೈಲ್‌ದಾಗ ದೇವಿ ವಿಡಿಯೋ ಮಾಡಿ, ಪೋಟಾ ತಗೆದು, 'ಕಾಡುಕಲ್ಲಿಗೆ ಮೂರು ಮೊಲೆ' ಇರುವುದನ್ನು ವಿಶೇಷವಾಗಿ ಬರೆದು ವಾಟ್ಸಪ್ ಗ್ರೂಪ್‌ನಲ್ಲಿ, ಫೇಸ್‌ಬುಕ್‌ನಲ್ಲಿ, ಇನ್‌ಸ್ಟಾಗ್ರಾಮ್‌ನಲ್ಲಿ ಅಪ್ಲೋಡ್ ಮಾಡಿ ತಮ್ಮೂರ ಸೀಮೆಯಲ್ಲಿ ನಡೆದ ಪವಾಡಸದೃಶ ವಿಷಯವನ್ನು ಕಂಡಕಂಡಲ್ಲಿ ಮಾತಾಡತೊಡಗಿದರು.

ಊರ ಮಂದಿ ಪದ್ದಕ್ಕ ಮತ್ತು ನನ್ನನ್ನು ಮಾತಾಡಿಸಿ, ಅದು ಹೆಂಗ, ಇದು ಹೆಂಗ ಅಂತ ಕೇಳಿದ್ದೇ ಕೇಳಿ ನಮ್ಮನ್ನು ಹೈರಾಣು ಮಾಡಿದ್ದರು. ನಮ್ಮೂರ ಮಂದಿಗೆ ದೇವರು ದೇವಿಯ ಇರುವಿಕೆ ಗೊತ್ತಾಗಿ ವಾರ ಉರುಳಿರಲಿಲ್ಲ, ಅಷ್ಟೊತ್ತಿಗಾಗಲೇ ಟಿ.ವಿ ಚಾನೆಲ್‌ದವರು, ಪತ್ರಿಕೆಯವರು ಸಿಕ್ಕಿದ್ದೇ ಸೀರುಂಡೆ ಎಂದು ನಮ್ಮೂರಿಗೆ ಬಂದೇ ಬಿಟ್ಟರು. ಆಗ ಪಾಟೀಲರು ಕಣ್ಣುಗಳು ತೆರೆದುಕೊಂಡವು.

ಪಾಟೀಲರು ಗರಿಗರಿ ಬಿಳಿ ಅಂಗಿ ತೊಟ್ಟು ಟಿವಿ ಕ್ಯಾಮೆರಾದ ಮುಂದೆ ನಿಂತುಕೊಂಡು ಹರಕಾ ಬುರಕಾ ಇಂಗ್ಲಿಷು ಮಾತಾಡುತ್ತಾ ದೇವಿಯ ಪವಾಡ ಶಕ್ತಿ, ತಮ್ಮೂರ ಸೀಮೆಯ ಮಹಿಮೆ ಬಗ್ಗೆ ಏನೋನೋ ಕಂತೆಕಂತೆ ಕಥೆ ಕಟ್ಟಿ ಹೇಳುತ್ತಿದ್ದರು. ಟಿವಿ ಚಾನೆಲ್‌ದವನಿಗೆ ಪಾಟೀಲರಾಡುವ ಮಾತು ಒಂದಕ್ಕೊಂದು ತಾಳ ತಂತಿ ಇರಲಾರದಕ್ಕೆ ಅವನ ಕಿವಿಯಲ್ಲಿ ಗೂಟ ಹೊಡೆದಂತೆ ಅನಿಸಿತು.

ಮೊದಲು ದೇವಿಯ ದರುಶನ ಪಡೆದು, ದೇವಿಗೆ ಪೂಜೆ ಸಲ್ಲಿಸಿದ ಪದ್ದಕ್ಕನ ಮೇಲೆ ಕ್ಯಾಮೆರಾ ಬೆಳಕನ್ನು ಹರಸಿ ವರದಿಗಾರ ಅವಳ ಮುಗ್ಧವಾದ ಹಳ್ಳಿ ಸೊಗಡಿನ ಮಾತನ್ನು ನೇರ ಪ್ರಸಾರ ಮಾಡ ತೊಡಗಿದ. ನಂತರ ನನ್ನ ಮೇಲೂ ಕ್ಯಾಮೆರಾ ಬೆಳಕು ಹರಿದಾಡಿದಾಗ ನಾನು ಅಂಜಿ ನಡುಗಿ ಮಾತಾಡದೇ ಹೆದರಿ ಅಲ್ಲಿಂದ ಓಡಿಹೋದೆ.

ಟಿವಿ ಮಾಧ್ಯಮದಲ್ಲಿ ದೇವಪುರದ